(ಕಛೇರಿ) 2224098, 2224195
2224301, 2222616
2224274, 2222505

# ಹುಬ್ಬಳ್ಳಿ - ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ - 580 025.

ಕ್ರ.ಸಂ. ಹು.ಧಾ.ನ.ಪ್ರಾ. : ಯೋ.ವಿ/ವಿನ್ಯಾಸ.1791/2017-18 | 675

ದಿನಾಂಕ : 6 -06-2017.

ಗೆ,

ತಹಶೀಲ್ದಾರರು
ಹುಬ್ಬಳ್ಳಿ ತಾಲೂಕ
ಹುಬ್ಬಳ್ಳಿ

ಮಾನ್ಯರೇ,

**ವಿಷಯ:** ಹುಬ್ಬಳ್ಳಿ ತಾಲೂಕ ಸುತಗಟ್ಟಿ ಗ್ರಾಮದ ರಿ.ಸ.ನಂ.99/3ಬ ನೇದ್ದರ ಕ್ಷೇತ್ರ 02ಎಕರೆ-26ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶಕ್ಕಾಗಿ ವಿನ್ಯಾಸ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:**-1) ನಿಮ್ಮ ಅರ್ಜಿ ದಿನಾಂಕ:24-01-2017.
2) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17ನೇ ತಿದ್ದುಪಡಿ ಆದೇಶ ದಿನಾಂಕ: 10-09-2015ರ ಅಧಿಸೂಚನೆ ಪ್ರಕಾರ.
3) ಪ್ರಾಧಿಕಾರದ ಸಭೆಯ ದಿನಾಂಕ:18-03-2017 ವಿಷಯ ನಂ:03(2) ರ ಠೀರ್ಮಾನ
4) ಶುಲ್ಕ ತುಂಬಿದ ಚಲನ ನಂ. 520, ದಿನಾಂಕ: 30-05-2017.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 17ನೇ ತಿದ್ದುಪಡಿ ಆದೇಶ ಆಗಿದ್ದು ಉಲ್ಲೇಖದನ್ವಯ ಹುಬ್ಬಳ್ಳಿ ತಾಲೂಕ ಸುತಗಟ್ಟಿ ಗ್ರಾಮದ ರಿ.ಸ.ನಂ.99/3ಬ ನೇದ್ದರ ಕ್ಷೇತ್ರ 02ಎಕರೆ-26ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ಉದ್ದೇಶಕ್ಕಾಗಿ ವಿನ್ಯಾಸ ಅನುಮೋದನೆ ನೀಡುವ ಕುರಿತು ಕೋರಿದ್ದು ಅದರಂತೆ, ಕರಡು ವಸತಿ ವಿನ್ಯಾಸವನ್ನು ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿದ್ದು, ಸದರಿ ವಸತಿ ವಿನ್ಯಾಸದನ್ವಯ ಕೆ.ಜೆ.ಪಿ ನಕ್ಷೆಯನ್ನು ತಯಾರಿಸಿ ಈ ಕಚೇರಿಗೆ ಕಳುಹಿಸಿಕೊಡುವಂತೆ ಈ ಮೂಲಕ ಕೋರಲಾಗಿದೆ. ಆದರೆ ಈ ಕಚೇರಿಯಿಂದ ಸದರಿ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡುವವರೆಗೆ ಕೆ.ಜೆ.ಪಿ.ಯನ್ನು ಪಹಣಿ ಪತ್ರಿಕೆಯಲ್ಲಿ ಅಮಲ ಬಜಾವಣೆ ಮಾಡಬಾರದು ಎಂದು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,

ಆಯುಕ್ತರು
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,
ಹುಬ್ಬಳ್ಳಿ.

ಪ್ರತಿಯನ್ನು:
1) ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಧಾರವಾಡ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2) ಹಿರಿಯ ಉಪನೋಂದಣಾಧಿಕಾರಿಗಳು, ಹುಬ್ಬಳ್ಳಿ ಇವರಿಗೆ ಕಳುಹಿಸುತ್ತಾ, ವಿನ್ಯಾಸದಲ್ಲಿ ಕೆ.ಜೆ.ಪಿ ಆದನಂತರ ಪ್ರಾಧಿಕಾರದಿಂದ ಅಂತಿಮ ಅನುಮೋದಿತ ನಕ್ಷೆಯನ್ನು ನೀಡಲಾಗುವುದು. ಅಲ್ಲಿಯ ತನಕ ಸದರಿ ವಿನ್ಯಾಸದಲ್ಲಿಯ ಯಾವುದೇ ನಿವೇಶನಗಳನ್ನು ನೊಂದಣಿ ಮಾಡಬಾರದೆಂದು ಈ ಮೂಲಕ ಕೋರಲಾಗಿದೆ.
3) ಶ್ರೀಮತಿ ಈರಮ್ಮಾ .ವಿ. ಹಳವೂರ, ಮತ್ತು ಶ್ರೀಮತಿ ಗಿರಿಜಾ .ಆರ್. ಅವರಾದಿ, ಸಾ॥ ಸುತಗಟ್ಟಿ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಅಭಿವೃದ್ಧಿ ವಿಭಾಗ, ಹು.ಧಾ.ನ.ಪ್ರಾ, ಹುಬ್ಬಳ್ಳಿ. ಶುಲ್ಕ ಭರಿಸಿಕೊಂಡು ಕಾರ್ಯಾದೇಶ ನೀಡಲು ಕೋರಿದೆ.
5) ಕೆ.ಯು.ಡಬ್ಲ್ಯೂಎಸ್. & ಡಿ.ಬಿ, ಧಾರವಾಡ.
6) ಹೆಸ್ಕಾಂ ಕಂಪನಿ, ಧಾರವಾಡಗಳಿಂದ ವಿನ್ಯಾಸ ಅಭಿವೃದ್ಧಿ ಪಡಿಸಲು ಕಾರ್ಯಾದೇಶವನ್ನು ಪಡೆದು 2 ವರ್ಷಗಳ ಅವಧಿಯೊಳಗೆ ಅಭಿವೃದ್ಧಿ ಪಡಿಸಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯಲು ಸೂಚಿಸಲಾಗಿದೆ.